ಕೌಂಟರಿನ ಬೆಡಗಿ ನನಗೆ ಮಧ್ಯದ ಸೀಟನ್ನು ದಯಪಾಲಿಸಿದ್ದಳು!

ಮಿಸ್ ಇನ್ಫಾರ್ಮೇಷನ್, ಡಿಲೇಸ್, ಕ್ಯಾನ್ಸಲ್ಲೇಷನ್ ಮತ್ತು ಅನುಕಂಪವೇ ಇಲ್ಲದ ಒರಟು ವರ್ತನೆಯ ಏರ್ ಇಂಡಿಯಾ ಬಗ್ಗೆ ಓದಿದ್ದೆನಾದರೂ ಸೆಲೆಬ್ರಿಟಿಯೊಬ್ಬರ ಹುಟ್ಟಿದ ಹಬ್ಬದಂದು ಅವರಿಗೆ ಕೇಕ್ ತಂದುಕೊಟ್ಟು ಶುಭ ಹಾರೈಸಿದ್ದ ಸಿಬ್ಬಂದಿ, ಆ ಗಣ್ಯರನ್ನು ಮತ್ತು ಅದೇ ದರ್ಜೆಯಲ್ಲಿರುವ ಸಹಪ್ರಯಾಣಿಕರನ್ನು ನಾವು ಎಷ್ಟು ವ್ಯತ್ಯಾಸ ಮಾಡಿ ನೋಡಿಕೊಳ್ಳುತ್ತೇವೆ ಎಂದು ಇಡೀ ಜಗತ್ತಿಗೇ ಸಾರಿ, ಛೀಮಾರಿ ಹಾಕಿಸಿಕೊಂಡಿದ್ದು ನೆನಪಿಗೆ ಬಂತು. ಅಂತಹ ದುರ್ವರ್ತನೆಯಿಂದ ಮುಕ್ತಗೊಳ್ಳಬೇಕೆಂದರೆ ಇವತ್ತು ಸಾಮಾನ್ಯಳಾದ ನನಗೂ ಕೇಕ್ ತಂದುಕೊಟ್ಟು ತಾವು ಭಿನ್ನವೆಣಿಸಿ 'ಪಕ್ಷಪಾತ' ಮಾಡುವುದೇ ಇಲ್ಲ ಎಂದು ಸಾಧಿಸಿ ತೋರಿಸಬಹುದೇನೋ ಎನ್ನುವ ಒಂದು ಸಣ್ಣ ಫ್ಯಾಂಟಸಿ ನನ್ನಲ್ಲೆಲ್ಲೋ ಅಡಗಿತ್ತು ಅನ್ನಿಸುತ್ತದೆ. ಆ ಲೋಭದ ಲಾಲಸೆಗೆ ಬಿದ್ದ ಮನಸ್ಸು ಲಾಭ ಮಾಡಿಕೊಳ್ಳಲು, ಲಾಬಿ ಮಾಡತೊಡಗಿದ ಕಾರಣ, ಸುಮ್ಮನಾದೆ. ಪಾದದ ಬಳಿ, ಮುಂದಿನ ಸೀಟಿನಡಿ, ಕೈಲಿದ್ದ ಬ್ಯಾಗುಗಳನ್ನು ಇಟ್ಟುಕೊಂಡು ಕಾಲನ್ನು ಸೀಟಿನ ಮೇಲಕ್ಕೆ ಮಡಚಿ ಕುಳಿತೆ.

ನನ್ನ ಬಲಬದಿ ಕೂತ ಪ್ರಯಾಣಿಕ ಇಡೀ ವಿಮಾನಕ್ಕೆ ಕೇಳುವಂತೆ, ತನ್ನ ಹೆಂಡತಿಯೊಡನೆ ವಿಡಿಯೊ ಕಾಲ್ ಮಾಡುತ್ತಿದ್ದ. ನನಗೆ, ನನ್ನ ಜಂಗಮವಾಣಿಯ ನೆನಪಾಯಿತು. ಫೋನ್ ಚಾರ್ಜಿಂಗ್ ಸಾಧ್ಯವೇ ಎಂದು ಸೀಟಿನ ಸುತ್ತ ಹುಡುಕತೊಡಗಿದೆ.

ನಮ್ಮ ಅಜ್ಜಿಯ ಮನೆಯಲ್ಲಿ ಗೋಡೆಯ ಹೊರಗೇ ಮೊಳೆಹೊಡೆದು ಸಿಕ್ಕಿಸುತ್ತ ಹೋಗಿದ್ದಂತಹ ಎರಡು ದಪ್ಪ ವೈರುಗಳು ನನ್ನ ಕಾಲ ಬಳಿಯೇ ನೇತಾಡುತ್ತಿದ್ದವು. ಅದರ ಒಂದು ತುದಿಗೆ ಎರಡು ಪ್ಲಗ್‌ಗಳು ದಪ್ಪಗೆ ಉಬ್ಬಿ ನಿಂತಿದ್ದವು. ಖುಷಿಯಲ್ಲಿ, ಅದಕ್ಕಿಂತ ಹೆಚ್ಚು ಉಬ್ಬಿ, ಫೋನಿನ ಚಾರ್ಜರ್ ಸಿಕ್ಕಿಸಿದೆ. ಗುಂಡಗೆ ಊದಿದ ಪೂರಿ, ಗಾಳಿ ಕಳೆದುಕೊಂಡು ಕುಸಿಯುವಂತೆ ಮನಸ್ಸು ಬಾಡಿಹೋಯಿತು. ಅವೆರಡೂ ಪ್ಲಗ್‌ಗಳು ಕೆಲಸ ಮಾಡುತ್ತಿರಲಿಲ್ಲ.

ಸಂಸಾರದ ಸಕಲ ಸುಖಗಳನ್ನು ತಮ್ಮ ಸೀಟಿನಲ್ಲೇ ಬಯಸುತ್ತಿದ್ದ ಜನರನ್ನು ಸಂಭಾಳಿಸಲು ಸಖಿಯರೆಲ್ಲ ಸರಬರ ಓಡಾಡುತ್ತಿದ್ದರು. 'ವಿಸ್ಕಿ ಕೊಡ್ತೀರಾ?' ಎಂದು ಕೇಳುತ್ತಿದ್ದ ಒಬ್ಬನ ಮೇಲೆ, ಸಖಿಯೊಬ್ಬಳು ಕೆಂಗಣ್ಣು ಬಿಟ್ಟು 'ಈಗಿಲ್ಲ' ಎಂದು ಚುಟುಕಾಗಿ ಉತ್ತರಿಸಿ ಬಾಯ್ಮುಚ್ಚಿಸಿದಳು. ಹಾಗೇ ತೇಲಿಕೊಂಡು, ಸುಖವಾಗಿ ಓಡಾಡಿಕೊಂಡಿದ್ದ ಸಖನೊಬ್ಬನನ್ನು ಹಿಡಿದು ಫೋನ್ ಚಾರ್ಜಿಂಗ್ ಬಗ್ಗೆ ಕೇಳಿದೆ. 'ವಿಮಾನ ಶುರುವಾದ ಮೇಲೆ ಮಾಡಬಹುದು' ಎಂದ.

ಆದರೆ, ಶುರುವಾಗಬೇಕಿದ್ದ ವೇಳೆಗೆ ವಿಮಾನ ಹೊರಡುವ ಯಾವ ಸೂಚನೆಗಳೂ ಕಾಣಲಿಲ್ಲ. ಅಷ್ಟರಲ್ಲೇ ಸಮವಸ್ತ್ರ ಧರಿಸಿದ್ದ ಇಬ್ಬರು ಎಂಥದ್ದೋ ಒಂದು ಯಂತ್ರವನ್ನು ದಬ್ಬಿಕೊಂಡು ದಡಬಡನೆಂದು ಪೈಲಟ್‌ಗಳಿದ್ದ ಕೋಣೆಗೆ ಹೋದರು. ಏರ್ ಇಂಡಿಯಾದ ಪೈಲಟ್ ಒಬ್ಬರು, ತನ್ನ ಗೆಳತಿಯನ್ನು ಕಾಕ್‌ಪಿಟ್ಟಿಗೆ ಬಿಟ್ಟುಕೊಂಡು ವಿಚಾರಣೆಗೆ ಒಳಗಾದದ್ದು ನೆನಪಿಗೆ ಬಂದು ಆತಂಕವಾಯಿತು. ಕ್ಷಣಾರ್ಧದಲ್ಲೇ 'ವಿಮಾನ ಶುರುವಾಗಲು ಇರುವ ತಾಂತ್ರಿಕ ತೊಂದರೆ ಸರಿಪಡಿಸಲು ಅರ್ಧಗಂಟೆಯಾಗಬಹುದು, ಮುಂಬೈನಿಂದ ಬೇರೆ ವಿಮಾನ ಹಿಡಿಯುವವರಿಗೆ ತೊಂದರೆಯಾದಲ್ಲಿ ಕ್ಷಮೆ ಯಾಚಿಸುತ್ತೇವೆ' ಎಂದು ಉಲಿಯಲಾಯಿತು.

'ಮುಂಬೈಯನ್ನಾದರೂ ತಲುಪುತ್ತೇವೆಯೇ?' ಎನ್ನುವ ಅವ್ಯಕ್ತ ಆತಂಕದಲ್ಲಿ ನಾವಾಗಲೇ ಮುಖ ಮುಖ ನೋಡಿಕೊಳ್ಳುತ್ತಿದ್ದೆವು. ನಲವತ್ತೈದು ನಿಮಿಷಗಳಾಗುವಷ್ಟರಲ್ಲಿ ಹಸಿವು, ನಿದ್ದೆಗಳಿಂದ ಜನರು ಚಡಪಡಿಸತೊಡಗಿದ್ದರು. ಅಂತೂ ಇಂತೂ ಗಡಗಡನೆಂದು ಹಾರುಯಂತ್ರದ ಎಂಜಿನ್ ಶುರುವಾಗುವ ವೇಳೆಗೆ, ಆಗ ತಾನೇ ರಿಪೇರಿಯಾದ ವಿಮಾನದಲ್ಲಿ ಬಂಧಿಯಾದ ಎಲ್ಲರೂ ಸಮಾಧಾನ ಮತ್ತು ದುಗುಡಗಳಿಂದ ಉಡುಗಿಹೋಗಿದ್ದರು.

ವಿಮಾನ ಹಾರತೊಡಗಿದಂತೆ, ಜನರು ನಿಧಾನಕ್ಕೆ ತಮ್ಮ ಮುಂದಿದ್ದ ಪುಟ್ಟ ಪರದೆಯಲ್ಲಿ ಮನರಂಜನೆ ಕಂಡುಕೊಳ್ಳಲು ಶುರುವಿಟ್ಟರು. ನಾನೂ ಮತ್ತು ನನ್ನ ಪಕ್ಕದವರೂ ಪ್ರಯತ್ನಿಸಿದೆವು. ಯಾವ ಪರದೆಯೂ ಹತ್ತಲಿಲ್ಲ. ಕರೆದು ಕೇಳಿದಾಗ, 'ಸಾರಿ ಮೇಡಂ, ಈ ಸಾಲಿನಲ್ಲಿ ಕೆಲಸ ಮಾಡುತ್ತಿಲ್ಲ' ಎಂದರು. ಜೊತೆಗೇ 'ನಾವು ಫೀಡ್‌ಬ್ಯಾಕ್ ಕೇಳ್ತೀವೆ ಮೇಡಂ, ಆಗ ಅದರಲ್ಲಿ ಕಂಪ್ಲೇಂಟ್ ಮಾಡಿ, ನಿಮಗೆ ರಿವಾರ್ಡ್ ಸಿಗುತ್ತೆ' ಎಂದು ಸ್ವೀಟಾಗಿ ಪ್ರೋತ್ಸಾಹಿಸಿದರು. ಆ ಗಗನಸಖಿ ಅತ್ತ ಹೋದ ಕೂಡಲೇ ಎಡಕ್ಕೆ ಕುಳಿತಿದ್ದ ನನ್ನ ಸಹ ಪ್ರಯಾಣಿಕ 'ಪ್ರತಿ ಸಾರಿ ಇದೇ, ಏನೂ ಸಿಗಲ್ಲ' ಎಂದು ಸಾಂತ್ವನ ಹೇಳಿದ. ನಮ್ಮಂತೆ, ಹಲವು ಸಾಲುಗಳಲ್ಲಿ ಮನರಂಜನಾ ಪರದೆಗಳು ಕೆಲಸ ಮಾಡುತ್ತಿರಲಿಲ್ಲ.

ರಾಜಕಾರಣಿಗಳು ಪ್ರಜೆಗಳ ದುಡ್ಡಿನಲ್ಲೇ ಹನಿಸುವ ಒಂದೆರಡು ಸವಲತ್ತುಗಳಿಗೆ ಅವರನ್ನು ದೇವರ ಅಪರಾವತಾರ ಎಂದು ಹೊಗಳುತ್ತ, ಆನಂದತುಂದಿಲರಾಗಿ ಬದುಕುವ ನಾಗರಿಕರಂತೆ ನಾನು ಕೂಡ ಪರಿವರ್ತಿತವಾಗತೊಡಗಿದ್ದೆ. ನನ್ನ ಫೋನ್ ಚಾರ್ಜ್ ಆಗುತ್ತಿದ್ದ ಕಾರಣ ದೊರಕಿದ ಅಲ್ಪತೃಪ್ತಿಯಲ್ಲೇ ಮಹಾತೃಪ್ತಿಯನ್ನು ಅನುಭವಿಸತೊಡಗಿ 'ಹೇ ಎಲ್ಲ ಕೆಟ್ಟದಾಗೇನಿಲ್ಲ, ಫೋನ್ ಚಾರ್ಜ್ ಆಗ್ತಾ ಇದೆಯಲ್ಲ' ಎಂದು ನನ್ನ ಅದೃಷ್ಟಗಳನ್ನು ಮಾತ್ರ ಗುಣಿಸಿಕೊಂಡು ಧನಾತ್ಮಕವಾಗಿ ಚಿಂತಿಸತೊಡಗಿದೆ.

ಅಷ್ಟರಲ್ಲೇ ಮಧ್ಯದ ಸಾಲಿನ ಮನುಷ್ಯ ಮುಂದಿದ್ದ ವಯಸ್ಸಾದ ಪ್ರಯಾಣಿಕರು ಅವರ ಸೀಟನ್ನು ಹಿಂದಕ್ಕೆ ಮಾಡಿ ಉಪದ್ರ ಮಾಡುತ್ತಿದ್ದಾರೆಂದು ಜಗಳ ತೆಗೆದ. ಮತ್ತೊಬ್ಬಳು ಸಹಾಯಕಿ ಬಂದು ತನ್ನ ಅಸಹಾಯಕತೆಯನ್ನು ಪ್ರದರ್ಶಿಸುತ್ತ ಅವನು ಕೂಡ ತನ್ನ ಸೀಟನ್ನು ಮುಂದಿದ್ದವರಂತೆ, ಹಿಂದಕ್ಕೆ ಹಾಕಿಕೊಳ್ಳಲು ಹೇಳಿ ಸಮಸ್ಯೆಯನ್ನು ಬಗೆಹರಿಸಿದಳು! ಅವನ ಹಿಂದಿದ್ದ ವ್ಯಕ್ತಿ ತಕರಾರು ತೆಗೆಯದೆ ಸುಮ್ಮನಾದ ಕಾರಣ ಸಿಚುಯೇಷನ್ ಡಿಫ್ಯೂಸ್ ಆಗಿ ಹೋಯಿತು. ದನಿಯಿದ್ದವರ ಸಮಸ್ಯೆಗಳನ್ನು ದನಿಯಿಲ್ಲದವರಿಗೆ ವರ್ಗಾಯಿಸಿ, ಪರಿಹಾರಕೊಟ್ಟಂತೆ ಮಾಡಿ ಪಲಾಯನಗೈಯುವ ಇಂತಹ ಪವಾಡಗಳು ಜರುಗುವ ಕಾರಣವೇ, ಭಾರತದಲ್ಲಿ ಎಷ್ಟೊಂದು ಸಮತೋಲನವಿದೆ ಎಂದು ನೆನೆದು ಖುಷಿಯಾಯಿತು.

ತಮ್ಮ ಫೋನಿನಲ್ಲೇ ಒಂದಷ್ಟು ಹೊತ್ತು ಪರದಾಡಿದ ನನ್ನ ಪಕ್ಕದಲ್ಲಿದ್ದವರು ನಿದ್ದೆಗೆ ಜಾರಿದರು. ನಾನು ಪುಸ್ತಕವೊಂದನ್ನು ತೆಗೆದೆ. ಆದರೆ, ಓದುವಷ್ಟು ಬೆಳಕಿರಲಿಲ್ಲ. ನನ್ನ ಸೀಟಿನ ಲೈಟನ್ನು ಹಾಕಲು ಯತ್ನಿಸಿದೆ. ಅದೂ ಕೆಲಸಮಾಡುತ್ತಿರಲಿಲ್ಲ. ಎದ್ದು ಹೋಗಿ ಸಹಾಯ ಕೇಳಿದೆ.

ಹಿಂದಿದ್ದ ಅವರ ಸ್ಟೇಷನ್‌ನಿಂದ 'ಕನೆಕ್ಷನ್ ಚೆಕ್ ಮಾಡಿ ಹಾಕ್ತೀವೆ ಮೇಡಂ' ಎಂದರು. ಏನಾಶ್ಚರ್ಯ?... ಜಗ್ಗನೆ ಲೈಟುಗಳು ಹೊತ್ತಿಕೊಂಡವು. ಆದರೆ, 'ಬೈ ಒನ್, ಗೆಟ್ ಟೂ ಫ್ರೀ' ಸ್ಕೀಂ ಜಾರಿಯಲ್ಲಿದೆಯೇನೋ ಎನ್ನುವಂತೆ, ಒಂದಲ್ಲ ಮೂರೂ ಸೀಟುಗಳ ಲೈಟುಗಳು ಉರಿಯತೊಡಗಿದವು!

ನನ್ನ ಪಕ್ಕದವರು ನಿದ್ರೆಯಲ್ಲೇ ಚಡಪಡಿಸತೊಡಗಿದರು. ಅವರ ಲೈಟುಗಳನ್ನು ಆರಿಸುವ ನನ್ನ ಪ್ರಯತ್ನಗಳು ನಿರರ್ಥಕವಾಗಿ ಮತ್ತೆ ಎದ್ದುಹೋಗಿ ಸಹಾಯ ಕೇಳಿದೆ.

'ಮೇಡಂ... ಹತ್ತಿದರೆ ಮೂರೂ ಹತ್ತಿಕೊಳ್ಳುತ್ತವೆ, ಇಲ್ಲದಿದ್ದರೆ ಒಂದೂ ಇಲ್ಲ' ಎಂದು ಸುಂದರವಾಗಿ ನಕ್ಕರು. ಅದೆಷ್ಟು ಬಾರಿ ಹೇಳಿ ಹೇಳಿ ಅವರಿಗೆ ಅಭ್ಯಾಸವಾಗಿತ್ತೋ, 'ಫೀಡ್‌ಬ್ಯಾಕ್ ಕೊಡಿ ಮೇಡಂ, ರಿವಾರ್ಡ್ ಸಿಗುತ್ತೆ' ಎಂದು ಮತ್ತೆ ಪುಸಲಾಯಿಸಿದರು. 'ಆರಿಸಿಬಿಡಿ...' ಎಂದು ಹೇಳುವ ವೇಳೆಗೆ, ಹೊದ್ದಿದ್ದ ಪೊರೆ ಕಳೆದುಕೊಂಡು ಅಪ್ಪಟ ಮೂಲದ ಕಡೆ ಸಂಧಾನ ಮಾಡಿಕೊಳ್ಳತೊಡಗಿದ್ದೆ.

ಒಂಬತ್ತು ಗಂಟೆಗಳಲ್ಲಿ ವಿಮಾನ ಮುಂಬೈನ ನೆಲವನ್ನು, ಗಡದ್ದಾಗೇ ಚುಂಬಿಸಿತು.

ಒಟ್ಟು ಎರಡು ಗಂಟೆ ತಡವಾಗಿ ತಲುಪಿದ್ದ ಕಾರಣ ಮುಂದಿನ ಬೆಂಗಳೂರು ವಿಮಾನ ಹಿಡಿಯಬೇಕೆಂದರೆ, ನೂರಾರು ಜನರೊಂದಿಗೆ ನಾನೀಗ ಸೆಣಸಬೇಕಿತ್ತು.

ಸಾಮಾನ್ಯವಾಗಿ ಎರಡು ವಿಮಾನಗಳ ಒಂದು ಪ್ರಯಾಣದಲ್ಲಿ, ಬೇರೆ, ಬೇರೆ ಏರ್‌ಲೈನ್ಸ್ ಆದರೆ ಮಾತ್ರ ನಾವು ನಮ್ಮ ಗಂಟುಮೂಟೆಯನ್ನು ಪಡೆದುಕೊಂಡು ಮತ್ತೆ ಚೆಕಿನ್ ಮಾಡಬೇಕಾಗುತ್ತದೆ. ಒಂದೇ ಏರ್‌ಲೈನ್ಸ್‌ನ ವಿಮಾನಗಳಾದರೆ ಅದರ ಅಗತ್ಯವಿರುವುದಿಲ್ಲ. ಆದರೆ ಎರಡೂ ವಿಮಾನಗಳು ಏರ್ ಇಂಡಿಯಾದವೇ ಆದರೂ ಲಂಡನ್ನಿನಲ್ಲಿ ಅವರೇ ಚೆಕ್ ಮಾಡಿ ತುಂಬಿಕೊಂಡಿದ್ದ ಅವೇ ಲಗೇಜ್‌ಗಳನ್ನು ಚೆಕೌಟ್ ಮಾಡಿ ಮತ್ತೆ ಚೆಕಿನ್ ಮಾಡಬೇಕು ಎಂದು ಹೇಳಿದ್ದರು. ಯಾಕೆಂದು ಹೇಳುವವರು ಯಾರೂ ಇರಲಿಲ್ಲ. ಇಂತಹವನ್ನು ಊಹಿಸಿಯೇ ಮೂರೂವರೆ ತಾಸುಗಳ ಅಂತರ ಇರಿಸಿಕೊಂಡರೂ, ಏರ್‌ಲೈನ್ಸಿನವರೇ ಎರಡು ಗಂಟೆ ತಡಮಾಡಿದ್ದ ಕಾರಣ, ಮುಂದಿನ ಅಷ್ಟೂ